# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 109 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 10.12.2018 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಜನರ ಕಲ್ಯಾಣಕ್ಕಾಗಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಯಾವುವು; ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಿಗೆ ಅರ್ಜಿಯನ್ನು ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು; ಪ್ರಯೋಜನವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ಯೋಜನಾವಾರು, ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು) | ಉಡುಪಿ ಜಿಲ್ಲೆಯ ಹಿಂದುಳಿದ ವರ್ಗಗಳ ಜನರ ಕಲ್ಯಾಣಕ್ಕಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.<br>1. ಸ್ವಯಂ ಉದ್ಯೋಗ ಸಾಲ ಯೋಜನೆಗಳು.<br>2. ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಗಳು.<br>3. ಅರಿವು-ಶೈಕ್ಷಣಿಕ ಸಾಲ ಯೋಜನೆ.<br>4. ಗಂಗಾ ಕಲ್ಯಾಣ ನೀರಾವರಿ ಯೋಜನೆ.<br>5. ತರಬೇತಿ ಕಾರ್ಯಕ್ರಮಗಳು.<br>ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳಿಗೆ ಅರ್ಜಿಯನ್ನು ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ 5024. ಒಟ್ಟು 2,446 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ. ಪ್ರಯೋಜನ ಪಡೆದ ಫಲಾನುಭವಿಗಳ ಯೋಜನಾವಾರು, ತಾಲ್ಲೂಕುವಾರು ಗ್ರಾಮವಾರು ವಿವರಗಳು **www.karnataka.gov.in/dbcdc** ರಲ್ಲಿ ಲಭ್ಯವಿರುತ್ತದೆ. |
| ಆ) | ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಒಂದು ಎಕರೆ ಕೃಷಿ ಜಮೀನು ಹೊಂದಿರಬೇಕೆನ್ನುವ ಷರತ್ತಿನಿಂದಾಗಿ ಉಡುಪಿ ಜಿಲ್ಲೆಯ ಬಹಳಷ್ಟು ಸಣ್ಣ ಹಿಡುವಳಿದಾರರು ಯೋಜನೆಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಮಿತಿಯನ್ನು 0.50 ಎಕರೆಗೆ ಮಿತಿಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; | ಹೌದು.<br>ಪ್ರಸ್ತುತ ಕನಿಷ್ಠ 1.00 ಎಕರೆ ಜಮೀನು ಹೊಂದಿರುವ ಫಲಾನುಭವಿಗಳಿಗೆ ಯೋಜನೆ ಸೌಲಭ್ಯ ನೀಡಲು ಅವಕಾಶ ಇದ್ದು, ಇದಕ್ಕಿಂತ ಕಡಿಮೆ ವಿಸ್ತೀರ್ಣದ ಜಮೀನುಗಳಿಗೆ ಯೋಜನೆ ಸೌಲಭ್ಯ ನೀಡುವುದು ಆರ್ಥಿಕವಾಗಿ ಸಿಂಧುವಲ್ಲದ ಕಾರಣ 0.50 ಎಕರೆಗೆ ಮಿತಿಗೊಳಿಸುವ ಉದ್ದೇಶ ಇರುವುದಿಲ್ಲ. |

| | | |
|---|---|---|
| ಇ) | ಉಡುಪಿ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಕೊರೆದ ಬಾವಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ನೀರನ್ನು ಹೊಂದಿದ ಯಶಸ್ವಿ ಮತ್ತು ನೀರನ್ನು ಹೊಂದದ ಬಾವಿಗಳ ಸಂಖ್ಯೆ ಎಷ್ಟು; ಇವುಗಳ ಮೌಲ್ಯಮಾಪನದ ಬಗ್ಗೆ ಇಲಾಖೆಯಿಂದ ಕೈಗೊಳ್ಳಲಾಗುವ ಕ್ರಮಗಳು ಯಾವುವು; ಮೌಲ್ಯಮಾಪನ ಇಲ್ಲವಾದಲ್ಲಿ ಕೆಲವೊಂದು ಪ್ರಕರಣಗಳಲ್ಲಿ ಫಲಾನುಭವಿ ಮತ್ತು ಗುತ್ತಿಗೆದಾರರು ಶಾಮೀಲಾಗಿ ಸರ್ಕಾರದ ಹಣ ಲೂಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯೋಜನೆಯ ಸದುದ್ದೇಶದಿಂದ ಮೂರನೇ ಪಕ್ಷಗಾರರಿಂದ ಮೌಲ್ಯಮಾಪನ ಮಾಡಿಸಲು ಅವಕಾಶವನ್ನು ಕಲ್ಪಿಸುವ ಬಗ್ಗೆ ಸರ್ಕಾರದ ಕ್ರಮವೇನು? | ಉಡುಪಿ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಕಳೆದ 3 ವರ್ಷಗಳಲ್ಲಿ :<br>ಕೊರೆದ ಕೊಳವೆ ಬಾವಿಗಳ ಹಾಗೂ ತೆರೆದ ಬಾವಿಗಳ ಸಂಖ್ಯೆ 255<br>ಇದರಲ್ಲಿ ನೀರನ್ನು ಹೊಂದಿದ ಯಶಸ್ವಿ ಬಾವಿಗಳ ಸಂಖ್ಯೆ : 252<br>ನೀರನ್ನು ಹೊಂದದ ಕೊಳವೆ ಬಾವಿಗಳ ಸಂಖ್ಯೆ : 3<br><br>ಕೊರೆದ ಯಶಸ್ವಿ ಕೊಳವೆ ಬಾವಿಗಳ/ತೆರೆದ ಬಾವಿಗಳ ಆಳ, ಅಳವಡಿಸಿದ ಕೇಸಿಂಗ್ ಪೈಪ್‌ನ ಅಳತೆಗಳನ್ನು ನಿಗಮದ ಸಹಾಯಕ ಅಭಿವೃದ್ಧಿ ಅಧಿಕಾರಿ ಹಾಗೂ ಜಿಲ್ಲಾ ವ್ಯವಸ್ಥಾಪಕರು ತಪಾಸಣೆ ಕೈಗೊಂಡು ಕೆಲಸದ ಮೌಲ್ಯಮಾಪನ ಮಾಡಿ, ನೀಡುವ ವರದಿ ಆಧಾರಿಸಿ ಬಿಲ್ಲಿನ ಮೊತ್ತದ ಶೇ.90ರಷ್ಟು ಮೊತ್ತ ಗುತ್ತಿಗೆದಾರರಿಗೆ ಪಾವತಿಸಲಾಗುತ್ತಿದೆ.<br><br>ನಂತರದ ಅವಧಿಯಲ್ಲಿ ಕೊಳವೆ ಬಾವಿಗಳ ಆಳ, ಅಳವಡಿಸಿದ ಕೇಸಿಂಗ್ ಹಾಗೂ ನೀರಿನ ಇಳುವರಿ ವ್ಯತ್ಯಾಸ ಉಂಟಾಗಿರುವುದು ದೃಢಪಟ್ಟಲ್ಲಿ ಶೇ.10ರಷ್ಟು ಮೊತ್ತದಿಂದ ನಷ್ಟವನ್ನು ವಸೂಲು ಮಾಡಲು ಅವಕಾಶ ಇರುತ್ತದೆ.<br><br>ಗುತ್ತಿಗೆದಾರರು ಹಾಗೂ ಫಲಾನುಭವಿ ಶಾಮೀಲಾಗಿ ಸರ್ಕಾರದ ಹಣ ಲೂಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. 3ನೇ ಪಕ್ಷಗಾರರಿಂದ ಶೇ.10ರಷ್ಟು ಕೊಳವೆ ಬಾವಿಗಳ ಮೌಲ್ಯಮಾಪನವನ್ನು ಕೈಗೊಳ್ಳುವ ವಿಧಾನವನ್ನು ಈಗಾಗಲೇ ಅಳವಡಿಸಿಕೊಳ್ಳಲಾಗಿರುತ್ತದೆ. |

ಸಂ: ಹಿಂವಕ 1207 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.